ಹರ ಹರ ಪರ್ವತೇ ಪತಯೇ ಹರ ಹರ ಮಹದೇವ್

हर हर पर्वते पतये हर हर महदेव्




**ಧ್ಯಾನ ಶ್ಲೋಕ – ಮಹರುದ್ರದೇವರ ಚಿಂತನಾಕ್ರಮ -**

**ಧ್ಯೇಯ: ಪಂಚಮುಖೋ ರುದ್ರ: ಸ್ಪಟಿಕಾಮಲ ಕಾಂತಿಮಾನ್ ।**
**ವಿದ್ಯುಚ್ಚಭ್ರಾಸಿತರಜ: ಶ್ಯಾಮಾನ್ಯಸ್ಯ ಮುಖಾನಿ ತು**
**ಜಟಾವಬದ್ಧೇಂದುಕಲ: ಪ್ರಿಯಾಯುಕ್ ನಾಗಭೂಷಣ: ॥**

ಪಂಚಮುಖನಾದ ರುದ್ರನು, ವಿದ್ಯುತ್ತಿನಂತೆ ಬಣ್ಣವು ಬಿಳಿ, ಕಪ್ಪು, ಕೆಂಪು, ನೀಲಿ ಬಣ್ಣಗಳಿಂದ ಕೂಡಿದ ಪಂಚಮುಖವುಳ್ಳವನು. ಸ್ಫಟಿಕದಂತೆ ಶುಭ್ರವಾದ ಮೈಬಣ್ಣವುಳ್ಳವನು, ಜಟೆಯಲ್ಲಿ ಚಂದ್ರನ ಕಲೆಯಿಂದ ಕೂಡಿದವನು, ನಾಗಭೂಷಣನಾಗಿ, ಪ್ರಿಯಳಾದ ಪಾರ್ವತೀದೇವಿಯೊಂದಿಗೆ ಇರುವ ರುದ್ರನನ್ನು ನಮಸ್ಕರಿಸುವೆನು.

**ವಾದಿರಾಜರು ರಚಿಸಿರುವ ಶಿವಸ್ತುತಿ –**

**ಫಣಿಗಣವರಭೂಷ: ಪಾರ್ವತೀಶ್ಲಾಘ್ಯ ವೇಷ:**
**ಖಲಜನ ಕೃತರೋಷ: ಖಂಡಿತಾತ್ಮೀಯ ದೋಷ: ।**
**ಸದರುಣಗಿರಿವಾಸ: ಶಕ್ರಸೂರ್ಯಾದ್ಯಧೀಶ:**
**ಪರಿಹೃತ ಭವಪಾಶ: ಪಾತು ಮಾಂ ಪಾರ್ವತೀಶ : ॥**

ವಿಷಮಯವಾದ ಸರ್ಪವೂ ನಿನಗೆ ಭೂಷಣ, ಪಾರ್ವತೀದೇವಿಯರಿಂದ ಶ್ಲಾಘ್ಯವಾದ ವೇಷ, ಖಲರನ್ನು ಕಂಡಾಗ ನಿನಗೆ ರೋಷ ಉಕ್ಕುವುದು, ನಿನ್ನ ಭಕ್ತರಲ್ಲಿ ದೋಷದೂರವಾಗುವುದು. ನಿನ್ನ ವಾಸ ಅರುಣಗಿರಿಯಲ್ಲಿ. ನೀನು ಶಕ್ರ–ಸೂರ್ಯ (ಇಂದ್ರ–ಸೂರ್ಯ)ರಿಗೂ ಈಶನು. ಪಾರ್ವತೀದೇವಿಗೆ ಪ್ರಾಣೇಶನಾದ ನೀನು ನನ್ನ ಮೋಹದ ಪಾಶವನ್ನು ಪರಿಹರಿಸು.

**ರುದ್ರದೇವರ ಹನ್ನೊಂದು ಹೆಸರುಗಳು –**

**ರುದ್ರ, ಮನ್ಯು, ಮನು, ಮಹಾನಾಸ, ಶಿವ, ಋತಧ್ವಜ, ಉಗ್ರರೇತ, ಭವ, ಕಾಲ, ವಾಮದೇವ, ಧೃತವ್ರತ.**

## "ಶಿವನ ವಿವಿಧ ನಾಮಗಳು – ಅರ್ಥ ಸಹಿತ"

"ವೃಷಧ್ವಜ", "ಕೃತ್ತಿವಾಸ", "ಶಂಭು", "ಸದ್ಯೋಜಾತ", "ಗಂಗಾಧರ", "ಪಿನಾಕಿ", "ವಿಷಕಂಠ", "ಸಾರಂಗಪಾಣಿ", "ತ್ರಿಶೂಲಪಾಣಿ", "ಡಮರುಗಪಾಣಿ", "ಚಂದ್ರಶೇಖರ"(ಸೋಮಶೇಖರ), "ಉಗ್ರ", "ನಟರಾಜ", "ಸದಾಶಿವ", "ನಾಗಾಭರಣ", "ಗಜಚರ್ಮಾಂಭರಧರ", "ನಂದಿವಾಹನ", "ಮುಕ್ಕಣ್ಣ", "ಶಂಕರ",

"ಮಹೇಶ್ವರ", "ಮೃತ್ಯುಂಜಯ", "ನಾಗಭೂಷಣ", "ಧೂರ್ಜಟಿ", "ಕಾಮರಿ", "ಉಗ್ರತಪಸ್"

- **"ರೋದನಾತ್ ರುದ್ರ:" ಜನ್ಮ –** "ಮಹತ್" ತತ್ವಕ್ಕೆ ಅಭಿಮಾನಿಯಾದ ಬ್ರಹ್ಮನಿಂದ ರುದ್ರದೇವರ ಜನ್ಮವಾದಾಗ ಮಗು ಸತತವಾಗಿ ರೋದಿಸುತ್ತಿತ್ತು. ಹುಟ್ಟಿದ ಕೂಡಲೇ ರೋದಿಸುತ್ತಿದ್ದರಿಂದ ಅವನಿಗೆ "ರುದ್ರ" ಎಂಬ ನಾಮಕರಣ ಮಾಡಿದ ಬ್ರಹ್ಮ.
- ಮಂಗಳಕರನಾದ್ದರಿಂದ – **"ಶಿವ"**
- ರುದ್ರದೇವರನ್ನು **ವಾಮದೇವ** ಎಂದು ಕರೆಯುತ್ತಾರೆ. ವಾಮ ಎಂದರೆ ಸುಂದರ. ಹರಿವಾಯುಬ್ರಹ್ಮದೇವರನ್ನು ಬಿಟ್ಟರೆ ರುದ್ರನಷ್ಟುಸುಂದರರು ಯಾರೂ ಇಲ್ಲ. 28 ಗುಣಗಳುಳ್ಳವನು ರುದ್ರ. ಸುಂದರನಾದುದರಿಂದ ವಾಮದೇವ. ಪರಮಾತ್ಮನನ್ನು ತನ್ನ ಎಡಭಾಗದಲ್ಲಿ ಇಟ್ಟುಕೊಂಡಿರುವುದರಿಂದ –"**ವಾಮದೇವ.**"
- ವೃಷಭಧ್ವಜನಾದ್ದರಿಂದ **– "**ವೃಷಭ**ಧ್ವಜ"**
- **ಆಶುತೋಶ** – ಶೀಘ್ರ ವರಪ್ರದನಾದ್ದರಿಂದ ಆಶುತೋಷ
- **ಅಂಧಕಾಸುರಹರ** – ಅಂಧಕಾಸುರನೆಂಬ ದೈತ್ಯನನ್ನು ಸಂಹರಿಸಿದ್ದರಿಂದ
- **ಗಜಚರ್ಮಾಂಬರಧರ** – ಗಜ ರೂಪದಲ್ಲಿ ಬಂದ ಗಜಾಸುರನೆಂಬ ದೈತ್ಯನನ್ನು ಗಜದ ಶರೀರದೊಳಗೇ ಪ್ರವೇಶಿಸಿ ಅವನನ್ನು ಸಂಹರಿಸಿದ್ದರಿಂದ
- ಚರ್ಮವನ್ನು ಧರಿಸಿರುವುದರಿಂದ – **"ಕೃತ್ತಿವಾಸ"**
- ಸುಖದ ನೆಲೆಯೇ ಶಿವನಾದ್ದರಿಂದ – "**ಶಂಭು**"
- ಚತುರ್ಮುಖನ ಕ್ರೋಧದಿಂದ ತತ್‌ಕ್ಷಣದಲ್ಲಿ ಹುಟ್ಟಿದ್ದರಿಂದ–"**ಸದ್ಯೋಜಾತ**"
- ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿರುವುದರಿಂದ – "**ಗಂಗಾಧರ**"
- ಪಿನಾಕ ಧನಸ್ಸನ್ನು ಧರಿಸಿರುವುದರಿಂದ **– "ಪಿನಾಕಿ"**
- ಸಮುದ್ರಮಥನ ಕಾಲದಲ್ಲಿ ಕಾಲಕೂಟವಿಷವನ್ನು ಪರಮಾತ್ಮನ ಆಜ್ಞೆಯಂತೆ ಭಕ್ಷಿಸಿದ ವಾಯುದೇವರು, ಕಡೆಗೆ ಸ್ವಲ್ಪವೇ ಸ್ವಲ್ಪ ವಿಷವನ್ನು ಅದನ್ನೂ ಚೆನ್ನಾಗಿ ಮಥಿಸಿ ಕೊಟ್ಟಾಗ ಅದನ್ನು ಭಕ್ಷಿಸಿ ಆ ವಿಷವು ತನ್ನ ಕಂಠದಲ್ಲಿ ನಿಂತಿರುವುದರಿಂದ – "**ವಿಷಕಂಠ**"

- ಸಾರಂಗ (ಜಿಂಕೆ)ಯನ್ನು ಕೊಂದು ತನ್ನ ಕೈಯಲ್ಲಿ ಇಟ್ಟುಕೊಂಡಿರುವುದರಿಂದ **"ಸಾರಂಗಪಾಣಿ"**
- ಶಿವನ ಕೈಯಲ್ಲಿ ತ್ರಿಶೂಲ ಧರಿಸಿರುವುದರಿಂದ – **"ತ್ರಿಶೂಲಪಾಣಿ"**
- ಡಮರುಗವನ್ನು ತನ್ನ ಕೈಯಲ್ಲಿ ಧರಿಸಿರುವುದರಿಂದ – **"ಡಮರುಗಪಾಣಿ"**
- ಚಂದ್ರನನ್ನು ಶಿರದಲ್ಲಿ ಧರಿಸಿರುವುದರಿಂದ – **"ಚಂದ್ರಶೇಖರ"(ಸೋಮಶೇಖರ)**
- ಶತ್ರುಭಯಂಕರನಾದ್ದರಿಂದ – **"ಉಗ್ರ"**
- ನಟ, ನಾಟ್ಯದಲ್ಲಿ ಪ್ರಸಿದ್ಧನಾದುದರಿಂದ – **"ನಟರಾಜ"**
- ಸದಾ ಸಜ್ಜನರಿಗೆ ಮಂಗಳವನ್ನು ಕರುಣಿಸುವನಾದ್ದರಿಂದ – **"ಸದಾಶಿವ"**
- ನಾಗ (ಸರ್ಪವನ್ನು)ನನ್ನು ಆಭರಣವಾಗಿರುವುದರಿಂದ – **"ನಾಗಾಭರಣ"**
- ಗಜಾಸುರನೆಂಬ ಅಸುರನನ್ನು ಕೊಂದು ಅವನ ಚರ್ಮವನ್ನು ಸ್ವತ: ಧರಿಸಿರುವುದರಿಂದ – **"ಗಜಚರ್ಮಾಂಭರಧರ"**
- ಎತ್ತನ್ನು ತನ್ನ ವಾಹನವಾಗಿ ಹೊಂದಿರುವುದರಿಂದ – **"ನಂದಿವಾಹನ"**
- ತ್ರಿಪುರಾಸುರಾದಿಗಳನ್ನು ಸಂಹಾರ ಮಾಡಿದ್ದರಿಂದ – **"ತ್ರಿಪುರಾರಿ"**
- ಮೂರು ಕಣ್ಣುಳ್ಳವನಾದ್ದರಿಂದ – "ಮುಕ್ಕಣ್ಣ" (ಮೂರು ಕಣ್ಣುಗಳಲ್ಲಿ ಸೂರ್ಯ, ಚಂದ್ರ ಮತ್ತು ಅಗ್ನಿ ನೆಲೆಸಿದ್ದಾರೆ)
- ಸುಖವನ್ನು ನೀಡುವನಾದ್ದರಿಂದ – **"ಶಂಕರ"**
- ಸಮರ್ಥರಾದ ಇಂದ್ರಾದಿಗಳಿಗಿಂತಲೂ ಮಹಾಸಮರ್ಥನಾದ್ದರಿಂದ – **"ಮಹೇಶ್ವರ"**
- ಮೃತ್ಯುವಿಗೆ ಅಭಿಮಾನಿಯಾದ ಯಮನನ್ನೂ ಮೀರಿಸಿರುವುದರಿಂದ **"ಮೃತ್ಯುಂಜಯ"**
- ಕೊರಳು ಮತ್ತು ಮೈಮೇಲೆ ನಾಗಗಳಿಂದಲಂಕೃತನಾದ್ದರಿಂದ **"ನಾಗಭೂಷಣ"**
- ತಪಸ್ಸಿನಿಂದಾಗಿ ಜಟೆಯನ್ನು ಹೊಂದಿರುವ ಕಾರಣದಿಂದ **"ಧೂರ್ಜಟಿ"**

- ಕಾಮನನ್ನು ಕೊಂದದ್ದರಿಂದ – **"ಕಾ**ಮಾರಿ"
- ಕಲ್ಪಗಟ್ಟಲೆ ಲವಣಸಾಗರದಲ್ಲಿ ಘೋರತಪಸ್ಸನ್ನು ಮಾಡಿದ್ದರಿಂದಾಗಿ **"ಉಗ್ರತಪಸ್"**

**ರುದ್ರ ಜನನ** – ಬ್ರಹ್ಮದೇವರು ಸನಕ ಸನಂದನಾದಿಗಳನ್ನು ಸೃಷ್ಟಿ ಮಾಡಿ ಅವರಿಂದ ಪ್ರಜಾ ಸೃಷ್ಟಿ ಮಾಡಲು ಹೇಳಿದಾಗ, ಸನಕ ಸನಂದನಾದಿಗಳು ಪರಮಹಂಸಾಶ್ರಮವನ್ನು ಸ್ವೀಕರಿಸಿದರಿಂದ ಕೋಪಗೊಂಡ ಬ್ರಹ್ಮನ ಭ್ರೂಮದ್ಯದಿಂದ ಜನಿಸಿದವರೇ ರುದ್ರದೇವರು. ಹುಟ್ಟಿದ ಕೂಡಲೇ ಜೋರಾಗಿ ಅತ್ತು "ರುದ್ರ" ಆದವನೇ ಶಿವ.

**ರುದ್ರಸೃಷ್ಟಿ** – ಬ್ರಹ್ಮದೇವರು ರುದ್ರನಿಗೆ ಸೃಷ್ಟಿ ಮಾಡಲು ಆಜ್ಞಾಪಿಸಿದಾಗ ಭೂತ-ಪ್ರೇತ, ಪಿಶಾಚಗಳು ಸೃಷ್ಟಿಯಾದವು.

**ಶಿವನಿಗೆ ಲಿಂಗ ರೂಪ ಏಕೆ? –**

ಒಮ್ಮೆ ಭೃಗುಋಷಿಗಳು ತ್ರಿಮೂರ್ತಿಗಳಲ್ಲಿ ಸರ್ವೋತ್ತಮರು ಯಾರು? ಎಂದು ಪರೀಕ್ಷಿಸಲು ಬಂದಾಗ, ಕೈಲಾಸದಲ್ಲಿ ಶಿವನು ಪಾರ್ವತಿಯೊಂದಿಗೆ ಸರಸ-ಸಲ್ಲಾಪದಲ್ಲಿ ತೊಡಗಿದ್ದನು. ಭೃಗುವಿನ ಆಗಮನವನ್ನು ಕಂಡರೂ ಕಾಣದಂತಿದ್ದ ಶಿವ-ಪಾರ್ವತಿಯರನ್ನು ಕಂಡು ಕೋಪಗೊಂಡು ಭೃಗು ಋಷಿಗಳು ಶಿವನಿಗೆ ಶಾಪವನಿತ್ತರು "ಸ್ತ್ರೀಲೋಲನಾದ ನಿನಗೆ ಉಳಿದೆಲ್ಲಾ ಅವಯುವಗಳು ಹೋಗಿ ಲಿಂಗರೂಪದಲ್ಲಿ ಮಾತ್ರ ಪೂಜೆ ಸಾಗಲಿ" ಎಂದು. ಹೀಗೆ ಶಿವನ ಲಿಂಗಸ್ವರೂಪಕ್ಕೆ ಪೂಜೆ ವ್ಯವಸ್ಥೆಯಾಯಿತು. ಎಲ್ಲೂ ಶಿವನ ಮೂರ್ತಿಗೆ ಪೂಜೆ ನಡೆಯುವುದಿಲ್ಲ. (ಭೃಗುವಿಗಿಂತ ಶಿವನು ತಾರತಮ್ಯದಲ್ಲಿ ಬಹಳ ಹಿರಿಯನಾದರೂ ಬ್ರಾಹ್ಮಣರ ಶಾಪಕ್ಕೆ ಗೌರವ ನೀಡಲು ಭಗವಂತನೇ ಅದನ್ನು ಪರಿಪಾಲಿಸುವಂತೆ ಅಪ್ಪಣೆ ನೀಡಿರುವುದರಿಂದ ಲಿಂಗರೂಪಕ್ಕೆ ಪೂಜೆ ಇದೆ).

**ರುದ್ರನಿಗೆ ನೈವೇದ್ಯ ಸ್ವೀಕಾರ ನಿಷಿದ್ಧ –**

**ಭುಂಜತೇ ಯೇ ಮತ್ಪ್ರಸಾದಂ ಪತ್ರಂ ಅನ್ನಂ ಪಯೋಽಪಿ ವಾ ತೇಷಾಂಸ್ಯಾತ್ ನಿಯತೋ ವಾಸ: ನರಕೇ ಚಾತಿದಾರುಣೇ । ಪತ್ರಂ ಪುಷ್ಪಂ ಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತಿ ನೈವೇದ್ಯಮಪಿ ತತ್ಸರ್ವಂ ಭೂಮ್ಯಾಂ**

**ತೋಯೋऽಥವಾ ಕ್ಷಿಪೇತ್ ॥** ಯಾರು ನನ್ನ ಪ್ರಸಾದವನ್ನು ಅದು ಪತ್ರವಾಗಲೀ, ಅನ್ನವಾಗಿರಲಿ, ಪಾಯಸವಾಗಲೀ, ಅದನ್ನು ಸ್ವೀಕರಿಸಿದವರಿಗೆ ಘೋರ ನರಕದಲ್ಲಿ ನರಳಾಟ ನಿಶ್ಚಿತ. ಅವನು ಪತ್ರ–ಪುಷ್ಪ–ನೀರು–ಹಣ್ಣು ನನಗೆ, ಭಕ್ತಿಯಿಂದ ಏನು ಕೊಟ್ಟರೂ ಸಹ ಅದನ್ನು ಸ್ವೀಕರಿಸದೆ ನಿಶ್ಚಿಂತೆಯಿಂದ ನೀರಿನಲ್ಲಿ ಬಿಡಿ ಅಥವಾ ತುಳಿಯದ ಭೂಮಿಯಲ್ಲಿ ಬಿಸಾಡಿರಿ. – ಹೀಗೆಂದು ಶಿವನೇ ತನ್ನ ತತ್ತ್ವ ತಿಳಿಸಿದ್ದಾನೆ.

**ಶಿವರಾತ್ರಿ –** ಮಾಘ ಕೃಷ್ಣ ಚತುರ್ದಶಿಯಂದು ಹೆಚ್ಚಾಗಿ ಶಿವರಾತ್ರಿಯನ್ನು ಆಚರಿಸಲಾಗುತ್ತದೆ. ಇದನ್ನು ವೈಷ್ಣವರು, ಅಧ್ವೈತಿಗಳು, ಎಲ್ಲ ಜಾತಿಯವರೂ ಆಚರಿಸುತ್ತಾರೆ. ಈ ದಿನ ಮಹಾರುದ್ರದೇವರು ಲಿಂಗರೂಪದಲ್ಲಿ ದೇವಲೋಕದಲ್ಲಿ ತನ್ನ ರೂಪ ಪ್ರಕಟಿಸಿಕೊಂಡನು. ಹೀಗಾಗಿ ಅಂದು ಲಿಂಗದರ್ಶನವು ಮಹಾಪ್ರಶಸ್ತ ಎಂಬ ಮಾತು ಬಂದಿದೆ. ಶಿವನು ಪಾರ್ವತಿಯನ್ನು ವಿವಾಹವಾದ ದಿನವೂ ಶಿವರಾತ್ರಿ. ಸಮುದ್ರಮಥನದಲ್ಲಿ ಬಂದ ಹಾಲಾಹಲ ವಿಷವನ್ನು (ವಾಯುದೇವರು ಭಕ್ಷಿಸಿ ಉಳಿಸಿಕೊಟ್ಟ ಸ್ವಲ್ಪವೇ ಸ್ವಲ್ಪ ವಿಷವನ್ನು) ಭಕ್ಷಿಸಿ ಇಡೀ ರಾತ್ರಿ ರುದ್ರ ತಾಂಡವನೃತ್ಯ ಆಡಿದನು. ಅದರ ಜ್ಞಾಪಕಾರ್ಥವಾಗಿ ಶಿವರಾತ್ರಿ ಆಚರಣೆ. ವೈಷ್ಣವರಲ್ಲಿ ಉಪವಾಸದ ಸಂಪ್ರದಾಯವಿಲ್ಲ. ಈದಿನ ಹೋಳಿಗೆ ಪಾಯಸ ಮಾಡಿ ಹಬ್ಬವನ್ನು ಆಚರಿಸುವಂತಹ ಸಂಪ್ರದಾಯ ನಮ್ಮದು.

## ಶಿವ ಚಂದ್ರಶೇಖರನಾದ –

ದಕ್ಷಪ್ರಜಾಪತಿಯು ತನ್ನ ೨೭ ಹೆಣ್ಣು ಮಕ್ಕಳನ್ನು (೨೭ ನಕ್ಷತ್ರಾಭಿಮಾನಿ ದೇವತೆಗಳಾದ ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಇತ್ಯಾದಿ) ಚಂದ್ರನಿಗೆ ಮದುವೆ ಮಾಡಿಕೊಟ್ಟಿದ್ದನು. ಆದರೆ ಶಿವನು ರೋಹಿಣಿಯನ್ನು ಬೇರೆ ಪತ್ನಿಯರಿಗಿಂತ ಸ್ವಲ್ಪ ಹೆಚ್ಚು ಕಾಳಜಿ ವಹಿಸುತ್ತಿದ್ದನು. ಇದನ್ನು ಗಮನಿಸಿದ ಚಂದ್ರನ ಇತರ ಪತ್ನಿಯರು ತನ್ನ ತಂದೆಗೆ ದೂರಿತ್ತರು. ಆಗ ದಕ್ಷಪ್ರಜಾಪತಿಯು ಚಂದ್ರನಿಗೆ "ಕ್ಷಯ" ರೋಗ ಬರಲಿ ಎಂದು ಶಪಿಸಿದನು. ಇದರಿಂದ ಕ್ರುದ್ಧನಾದ ಚಂದ್ರನು ತನ್ನ ಕಾಂತಿಯನ್ನು ದಿನದಿಂದ ದಿನಕ್ಕೆ ಕಳೆದುಕೊಳ್ಳುತ್ತಿದ್ದನು. ಚಂದ್ರನು ಶಿವನಲ್ಲಿ ಆಶ್ರಯವನ್ನು ಬೇಡಿದನು. ಆಗ ಚಂದ್ರನನ್ನು ಶಿವನು ತನ್ನ ತಲೆಯಲ್ಲಿ ಇಟ್ಟುಕೊಂಡು ಆಶ್ರಯ ನೀಡಿದನು. ಆದ್ದರಿಂದ ಶಿವನು ಚಂದ್ರಶೇಖರನಾದನು.

ಚಂದ್ರನ ಇತರ ಪತ್ನಿಯರು ಚಂದ್ರನನ್ನು ಕಾಣದೆ ನಿರಾಶರಾಗಿ, ಮತ್ತೆ ತನ್ನ ತಂದೆಯಲ್ಲಿ ದೂರಿತ್ತರು. ದಕ್ಷನು ಎಲ್ಲ ಕಡೆ ಚಂದ್ರನನ್ನು ಹುಡುಕಲು, ಕಾಣದೆ, ಕೊನೆಗೆ ಅವನು ಶಿವನಲ್ಲಿ ಆಶ್ರಯವನ್ನು ಪಡೆದಿರುವುದನ್ನು ಕಂಡು ಶಿವನಲ್ಲಿ ಬೇಡುತ್ತಾನೆ, ಆದರೆ ತಾನು ಆಶ್ರಯವನ್ನು ನೀಡಿರುವವನನ್ನು ಬಿಡಲಾಗುವುದಿಲ್ಲವೆನ್ನಲು, ಆಗ ದಕ್ಷ ಪ್ರಜಾಪತಿಯು ಶ್ರೀಹರಿಯನ್ನು ಮೊರೆಹೋಗಲು, ಶ್ರೀಹರಿಯು ಅವನಿಗೆ ಬ್ರಹ್ಮಚಾರಿಯ ರೂಪದಲ್ಲಿ ಬಂದು ಶಿವನಲ್ಲಿದ್ದ ಚಂದ್ರನ ಪ್ರತಿಬಿಂಬವನ್ನು ಸೃಷ್ಟಿಸಿ, ಅದರಲ್ಲಿ ಚಂದ್ರನ ಒಂದು ಅಂಶವನ್ನು ಇಟ್ಟು ಕಳಿಸಿದನು. ಈಗ ನಾವೆಲ್ಲ ಕಾಣುವ ಚಂದ್ರನು ಆ ಅಂಶಂಶಿಭಾವದ ಚಂದ್ರನೇ. (ಆಧಾರ ಬ್ರಹ್ಮ ವೈವರ್ತಪುರಾಣ)

**ದಕ್ಷಯಜ್ಞ ಮತ್ತು ಶಿವ – (ಭಾಗವತ)**

ಬ್ರಹ್ಮಪುತ್ರ ದಕ್ಷಪ್ರಜಾಪತಿಯು ತನ್ನ ಮಗಳಾದ ಸತೀದೇವಿಯನ್ನು ಶಿವನಿಗೆ ನೀಡಿ ಶಿವನ ಮಾವಗಿದ್ದಾನೆ. ಒಮ್ಮೆ ದಕ್ಷಪ್ರಜೇಶ್ವರನು ಒಂದು ಶ್ರೇಷ್ಟ ಸತ್ರಯಾಗವನ್ನು ಮಾಡಿ ಅಲ್ಲಿಗೆ ಎಲ್ಲ ದೇವಾದಿದೇವತೆಗಳನ್ನು, ಗಂಧರ್ವ, ಕಿನ್ನರ ಕಿಂಪುರುಷರನ್ನೂ, ಋಷಿಮುನಿಗಳನ್ನು ಆಹ್ವಾನಿಸಿದ್ದನು. ಆ ಯಾಗಕ್ಕೆ ಬ್ರಹ್ಮರುದ್ರಾದಿ ದೇವತೆಗಳೂ ಆಗಮಿಸಿದ್ದರು. ದಕ್ಷಪ್ರಜೇಶ್ವರನು ಆ ಯಾಗಕ್ಕೆ ಆಗಮಿಸಿದಾಗ, ತಾನು ಬ್ರಹ್ಮದೇವರಿಗೆ ವಂದಿಸಿ ಮುನ್ನಡೆದನು. ಶಿವನು ತನ್ನ ಹೃದಯ ಕಮಲದಲ್ಲಿ ನೆಲೆಸಿರುವ ಬ್ರಹ್ಮಾಂತರ್ಗತ ಶ್ರೀಹರಿಯನ್ನು ಧ್ಯಾನಿಸುತ್ತಿದ್ದರಿಂದ ತನ್ನ ಮಾವ ಬಂದದ್ದನ್ನು ಗಮನಿಸದೆ ಇದ್ದನು. ಇದರಿಂದ ತನ್ನ ಅಳಿಯನು ತನಗೆ ಮರ್ಯಾದೆಮಾಡದುದ್ದರಿಂದ ಕ್ರುದ್ಧನಾದ ದಕ್ಷನು ಶಿವನನ್ನು ನಿಂದಿಸಿ, ಸ್ಮಶಾನವಾಸಿಯಾದ ಇಂತಹವನಿಗೆ ಮಗಳನ್ನು ಕೊಟ್ಟದ್ದೇ ತಪ್ಪೆಂದು ಎಲ್ಲರ ಮುಂದೆ ಅವಮಾನಿಸಿ, ಇನ್ನು ಮುಂದೆ ಯಾರೂ ಶಿವನಿಗೆ ಹವಿಸ್ಸನ್ನು ನೀಡಬಾರದೆಂದು ಶಪಿಸಿದನು. ಈ ಶಾಪವನ್ನು ಕಂಡು ಸಹಿಸಲಾರದ ನಂದೀಶ್ವರನು ಪ್ರತಿಶಾಪವನ್ನು ನೀಡಿ ದಕ್ಷನು ಯಥಾರ್ಥಜ್ಞಾನದಿಂದ ವಂಚಿನಾಗಲಿ, ಮತ್ತು ಅವನಿಗೆ ಆಡಿನ ಮುಖ ಬರಲಿ ಎಂದು ಶಪಿಸಿದನು.

ಸಾವಿರಾರು ವರ್ಷ ನಡೆದ ಈ ಸತ್ರದ ನಂತರ ಮುಂದೊಂದು ದಿನ ದಕ್ಷನು ಮತ್ತೆ "ಬ್ರಹಸ್ಪತಿಸವಂ" ಎಂಬ ಬೃಹತ್ತಾದ ಯಜ್ಞವನ್ನು ಮಾಡಲು ಉದ್ಯುಕ್ತನಾಗಿ ಎಲ್ಲ ದೇವಾದಿ ದೇವತೆಗಳನ್ನೂ, ಋಷಿಮುನಿಗಳನ್ನು, ಕರೆದು ತನ್ನ ಮಗಳು–ಅಳಿಯನನ್ನು ಮಾತ್ರ ಆಹ್ವಾನಿಸಲಿಲ್ಲ. ಸತೀದೇವಿಯು ಸಾಮಾನ್ಯ ಜನರಂತೆ ನಟಿಸುತ್ತಾ ತಾನೂ ತನ್ನ ತಂದೆಯ ಯಜ್ಞಕ್ಕೆ ಹೋಗಲು ಅಪ್ಪಣೆ ಕೇಳಿದಾಗ ಶಿವನು ಸಮ್ಮತಿಸಲಿಲ್ಲ.

ಆದರೂ ಹಠ ಮಾಡಿ ಯಾಗಕ್ಕೆ ಹೋಗಿ, ಅಲ್ಲಿ ಶಿವನಿಗೆ ಹವಿಸನ್ನು ನೀಡದಿದ್ದರಿಂದ ತನ್ನ ತಂದೆಯಿಂದ ಅವಮಾನಿತಳಾಗಿ, ತಾನು ದಾಕ್ಷಾಯಿಣಿ ಎಂದು ಕರೆಸಿಕೊಳ್ಳುವುದೇ ಬೇಡವೆಂದು ತೀರ್ಮಾನಿಸಿ ಬೆಂಕಿಯನ್ನು ಸೃಷ್ಟಿಸಿ ಅದರಲ್ಲಿ ಪ್ರವೇಶಿಸಿ, ದೇಹತ್ಯಾಗ ಮಾಡಿದಳು.

ಇವಳ ಜೊತೆ ಬಂದಿದ್ದ ಶಿವಚರರೂ ಎಲ್ಲ ಯಜ್ಞವನ್ನೂ ಧ್ವಂಸ ಮಾಡಿದರು, ದಕ್ಷ ಪ್ರಜೇಶ್ವರನ ತಲೆಯನ್ನೇ ವೀರಭದ್ರನು ಕಡೆಯಲು ಪ್ರಯತ್ನಿಸಿದಾಗ, ವಿಫಲನಾದಾಗ, ಶಿವನೇ ಬಂದು ಬ್ರಹ್ಮದೇವರ ಅನುಗ್ರಹದಿಂದ ಆ ತಲೆಯನ್ನು ಕಡೆದು ಹಾಕಿದರು. ಮತ್ತು ಅವನಿಗೆ ಆಡಿನ ತಲೆಯನ್ನು ಜೋಡಿಸಲಾಯಿತು.

**ಶಿವನ ಮೂಲ ರೂಪಕ್ಕೂ ಮತ್ತು ಅವತಾರ ರೂಪಕ್ಕೂ ಶಕ್ತಿಯಲ್ಲಿ ಭೇದ –**
ಅಶ್ವತ್ತಾಮನು (ಶಿವನ ಅವತಾರ) ಕುರುಕ್ಷೇತ್ರ ಯುದ್ದ ಸಮಯದಲ್ಲಿ ಪಾಂಡವರ ಶಿಬಿರಕ್ಕೆ ಪ್ರವೇಶಿಸಿದಾಗ, ಅಲ್ಲಿ ಮೂಲರೂಪದ ಶಿವನೇ ಕಾವಲುಗಾರನಾಗಿದ್ದನು. ಇವನನ್ನು ಒಳಗೆ ಬಿಡದಿದ್ದಾಗ ಘೋರ ಯುದ್ಧವಾಗಲು, ಅಶ್ವತ್ತಾಮನು ಪ್ರಯೋಗಿಸಿದ ಬಾಣವನ್ನೆಲ್ಲ ಶಿವನು ನುಂಗಿದನು.  ನಂತರ ಶರಣಾಗತನಾದ ಅಶ್ವತ್ತಾಮನಿಗೆ ಕೃಷ್ಣ ಪರಮಾತ್ಮನ ಆದೇಶದಂತೆ ಆ ಎಲ್ಲ ಅಸ್ತ್ರಗಳನ್ನೂ ಹಿಂತಿರುಗಿಸಿದನು. ಇದರಿಂದ ಶಿವನ ಮೂಲ ರೂಪಕ್ಕೂ ಅವತಾರ ರೂಪಕ್ಕೂ ಶಕ್ತಿ ಸಾಮ್ಯವಿಲ್ಲವೆಂದು ಧೃಡವಾಗುತ್ತದೆ. ಆದರೆ ವಾಯುದೇವರ ವಿಷಯದಲ್ಲಿ ಹಾಗಲ್ಲ – ಅವತಾರವಾಗಲೀ ಮೂಲ ರೂಪದಲ್ಲಾಗಲೀ ಎಲ್ಲೂ ಶಕ್ತಿಹ್ರಾಸವಿಲ್ಲ. (ಮಾ.ಭಾ.ತಾ.ನಿ ೨೮.೧೨೪)

## ಶಿವನಿಗೆ ಬಹಳ ಇಷ್ಟವಾದ ವಾರ – ಸೋಮವಾರ

**ಶಿವ ಪರಮ ವೈಷ್ಣವ :** "ವೈಷ್ಣವಾನಾಂ ಯಥಾ ಶಂಭು:"

**ಶಿವನಿಂದ ಹರಿಸರ್ವೋತ್ತಮ ಪ್ರತಿಪಾದನೆ –**

೧. ಭೃಗು ಋಷಿಗಳು ಬಂದು ಸರ್ವೋತ್ತಮರಾರೆಂದು ಕೈಲಾಸಕ್ಕೆ ಬಂದಾಗ ಪಾರ್ವತೀದೇವಿಯೊಡನೆ ಸರಸ–ಸಲ್ಲಾಪದಲ್ಲಿ ನಿರತನಾಗಿ ಭೃಗುವನ್ನು ಕೋಪಿಗೊಳಿಸಿ ಶಾಪಗ್ರಸ್ಥನಾಗಿ ಲಿಂಗಪೂಜೆ ಮಾಡಿಸಿಕೊಂಡು ಹರಿಸರ್ವೋತ್ತಮತ್ವಕ್ಕೆ ನಾಂದಿ ಹಾಡಿದ.

೨. ದೂರ್ವಾಸನಾಗಿದ್ದಾಗ ಹರಿಭಕ್ತನಾದ ಅಂಬರೀಷನನ್ನು ಪರೀಕ್ಷಿಸುವ ನೆಪದಲ್ಲಿ ದ್ವಾದಶಿ ಪಾರಣೆ ತಡವಾಗಿ ಬಂದು, ಅಂಬರೀಷನ ವ್ರತ ಭಂಗ ಮಾಡಿದಾಗ, ಮತ್ತು ಅವನಿಗೆ ಶಾಪ ನೀಡಲು ಉದ್ಯುಕ್ತನಾದಾಗ ವಿಷ್ಣು ಚಕ್ರ ಅಟ್ಟಿಸಿಕೊಂಡು ಬಂದು ಎಲ್ಲಾ ಲೋಕಗಳಿಗೂ ಸುತ್ತಿಸಿ, ಕಡೆಗೆ ಹರಿಸರ್ವೋತ್ತಮ ಪ್ರತಿಪಾದನೆ ಮಾಡಿದರು. ಇಲ್ಲಿ ಕೆಲವರು ಅಂಬರೀಷನೇ ದೂರ್ವಾಸರಿಗಿಂತ ಹೆಚ್ಚು ವೈಷ್ಣವ ಎಂದು ಭಾವಿಸಿದ್ದಾರೆ. ಆದರೆ ನಿಜವಾದ ಸಂಗತಿ ಅಂಬರೀಷ ದೂರ್ವಾಸನಿಗಿಂತ (ರುದ್ರನ ಅವತಾರ) ಬಹಳ ಬಹಳ ಚಿಕ್ಕವನು. ಇದು ಪರಮಾತ್ಮನ ಸಂಕಲ್ಪ ಮತ್ತು ರುದ್ರದೇವರ ಪರಮಾತ್ಮನ ಮೇಲಿನ ನಿಷ್ಠೆಯನ್ನು ತೋರಿಸಲು ಒಂದು ನಾಟಕ ಅಷ್ಟೇ,

೩. ಶುಕಾಚಾರ್ಯರಾಗಿದ್ದಾಗ ಪರೀಕ್ಷಿತ ಮಹಾರಾಜನಿಗೆ ಭಾಗವತ ಪ್ರತಿಪಾದ್ಯನ ಕಥೆಯನ್ನು ಹರಿಸಿ, ಹರಿಸರ್ವೋತ್ತಮತ್ವ ಪ್ರತಿಪಾದನೆ ಮಾಡಿದರು.

೪. ರುದ್ರದೇವರು ಇಲಾವೃತ ಖಂಡದಲ್ಲಿ ಮಹಾವಿಷ್ಣುವಿನ ಶ್ರೀಸಂಕರ್ಷಣ ರೂಪವನ್ನು ಕುರಿತು ಮಾಡುವ ಅದ್ಭುತ ಸ್ತೋತ್ರ ಶ್ರೀಮದ್ಭಾಗವತ ಪಂಚಮಸ್ಕಂಧದಲ್ಲಿದೆ.

೫. ಶಿವನು ಪ್ರಾಚೇತಸರಿಗೆ ಉಪದೇಶಿಸಿದ್ದು "ರುದ್ರಗೀತೆ" ಎಂಬ ಹೆಸರಿನಿಂದ ಪ್ರಸಿದ್ಧಿ. ಆದರೆ ಈ ರುದ್ರಗೀತೆಯಲ್ಲಿ ಬಂದಿರುವುದೆಲ್ಲ ಪರಮಾತ್ಮನ ಗುಣಗಾನವೇ ಹೊರತು ರುದ್ರಗುಣಗಾನವಲ್ಲ ಎಂಬುದು ವಿಶೇಷ.

೬. ಅಶ್ವತ್ತಾಮರಾಗಿದ್ದಾಗ, ಪರೀಕ್ಷಿತ ಮಹಾರಾಜನನ್ನು ಹುಟ್ಟುವ ಮೊದಲೇ ಕೊಲ್ಲುವ ಪ್ರಯತ್ನದಲ್ಲಿ, ಪರಮಾತ್ಮನು ತನ್ನ ವಿಷ್ಣುಚಕ್ರದ ರೂಪದಲ್ಲಿ ವೈಷ್ಣವಾಗ್ರೇಸರನಾದ ಪರೀಕ್ಷಿತನನ್ನು ರಕ್ಷಿಸಲು ಸೋತು, ಹರಿಸರ್ವೋತ್ತಮತ್ವ ಪ್ರತಿಪಾದನೆ ಮಾಡಿದರು.

೭. ತನ್ನ ಪತ್ನಿ ಉಮಾದೇವಿಯರಿಗೆ ಇಡೀ ವಿಷ್ಣುಸಹಸ್ರನಾಮದ ಸಾರವಾದ

ರಾಮನಾಮವನ್ನು ವಿವರಿಸಿದರು. –

**ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ।**
**ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ ॥**

ಪಾರ್ವತೀದೇವಿಯರ ಪ್ರಶ್ನೆಗೆ ಉತ್ತರಿಸುತ್ತಾ, ಈಶ್ವರನು "ಶ್ರೀರಾಮ" ವು ಬಹಳ ಶ್ರೇಷ್ಟವೆಂದೂ, ಅದನ್ನು ಪಠಿಸುವುದರಿಂದ ಇಡೀ ವಿಷ್ಣು ಸಹಸ್ರನಾಮದ ಫಲವು ಪ್ರಾಪ್ತವಹುದೆಂದು ಹೇಳುತ್ತಾರೆ. **ಪುರಾಣ, ಮಹಾಭಾರತದ ಸಾರ ಎಂದರೆ ರಾಮನಾಮ. ಆ ರಾಮನಾಮ ಜಪಮಾಡುವ ಶಿವನೇ ಅದರ ಮಹಿಮೆ ಬಲ್ಲವನು.**

೮. ದಕ್ಷ ಮಹಾರಾಜನ (ಶಿವನ ಮಾವ) ಯಜ್ಞದಲ್ಲಿ ಶ್ರೀಮನ್ನಾರಾಯಣನ ಸ್ಮರಣೆ ಮಾಡುತ್ತಿದ್ದಾಗ ಬಂದ ತನ್ನ ಮಾವನನ್ನು ಕಡೆಗಣಿಸಿ, ದಕ್ಷನಿಂದ ಅವಮಾನಿತನಾದಾಗಲೂ ಸ್ವಲ್ಪವೂ ವಿಚಲಿತನಾಗಲಿಲ್ಲ – ಅಲ್ಲಿಯೂ ಕೂಡ ಅವನು ಸ್ಮರಣೆ ಮಾಡುತ್ತಿದ್ದುದು ಶ್ರೀಹರಿಯನ್ನೇ.

**೯. ಶಿವನ ವರ ಬಲ** – ಶಿವನ ವರ ಬಲದಿಂದ ಅನೇಕಾನೇಕ ರಾಕ್ಷಸರು ತಮ್ಮ ಬಲವನ್ನು ಹೆಚ್ಚಿಸಿಕೊಂಡಿದ್ದಾರೆ. ರಾವಣ, ಕುಂಭಕರ್ಣ, ಭಸ್ಮಾಸುರಾದಿಗಳು ಶಿವಭಕ್ತರಾಗಿದ್ದರೂ, ಅವನ ವರಬಲದಿಂದ ಹೆಚ್ಚು ಸಾಮರ್ಥ್ಯವನ್ನು ಹೊಂದಿದ್ದರೂ ಪರಮಾತ್ಮನ ಮುಂದಿ ಇವರ ವರಬಲವೆಲ್ಲಾ ಶೂನ್ಯವಾಯಿತು. ಇಲ್ಲಿ ಕೂಡ ಹರಿ ಸರ್ವೋತ್ತಮತ್ವ ವನ್ನೇ ಸಾರಿದ್ದಾನೆ **"ಶಿವ"**

೧೦. ಶಿವನ ಪರಮಭಕ್ತನಾದ ಘಂಟಾಕರ್ಣ ತಪಸ್ಸನ್ನು ಮಾಡಿ ಮೋಕ್ಷ ಬೇಡಲು, ಶಿವನು ಘಂಟಾಘೋಷವಾಗಿ ಹೇಳುತ್ತಾನೆ "ನೀನು ನನ್ನನ್ನು ನಂಬಿರುವುದು ನಿಜ. ನಿನ್ನ ನಿರ್ಮಲ ಮನಸ್ಸಿಗೆ ನಾನು ಮಾರು ಹೋಗಿರುವೆ. ನಿನಗಾಗಿ ನಿಜವನ್ನು ಹೇಳುವೆನು. ನನ್ನಿಂದ ಮೋಕ್ಷ ಕೊಡಿಸಲಾಗದು. ನೀನು ದ್ವಾರಕಾಧೀಶ ಬದರೀನಾಥ ನಾರಾಯಣನಿಗೆ ಶರಣಾಗು, ಆಗ ಮೋಕ್ಷ ಸಿಗಬಹುದು" – ಹರಿವಂಶದ ಭವಿಷ್ಯಪರ್ವದಲ್ಲಿ.

೧೧. ಸ್ಕಾಂದಪುರಾಣವು ಶೈವಪುರಾಣಗಳ ವ್ಯಾಪ್ತಿಯಲ್ಲೇ ವಿಭಾಗಗೊಂಡಿದೆ. ಅಲ್ಲಿಯೂ ಸಹ ಶಿವನು ವಿಷ್ಣು ಸರ್ವೋತ್ತಮತ್ವವನ್ನೇ ಸಾರಿದ್ದಾನೆ.

ಪರಮೋ ವಿಷ್ಣುರೇವೈಕ: ತಜ್ಞಾನಂ ಮೋಕ್ಷಸಾಧನಮ್ ।
ಶಾಸ್ತ್ರಾಣಾಂ ನಿರ್ಣಯಸ್ತ್ವೇಷ: ತದನ್ಯನ್ಮೋಹನಾಯ ಹಿ ॥
ಅಸದೃಶನಾದ ಹರಿಯೇ ಸರ್ವೋತ್ತಮ. ಅವನ ಜ್ಞಾನವೇ ಮುಕ್ತಿಗೆ ಕಾರಣ. ಇದು ಶಾಸ್ತ್ರಗಳ ನಿರ್ಣಯ. ಉಳಿದದ್ದು ಬೇರೆಯವರನ್ನು ಬೇಸ್ತುಬೀಳಿಸಲು ರಚಿತವಾಗಿವೆ.

೧೨. ಒಮ್ಮೆ ಶ್ರೀಹರಿಯ ಮೋಹಿನೀ ರೂಪ ಕಾಣಬೇಕೆಂಬ ತವಕ ರುದ್ರದೇವರಿಗೆ ಬಂತು. ಭಗವಂತ ಬೇಡವೆಂದ. ನೀನು ಪರಮವೈರಾಗ್ಯ ಶಿಖಾಮಣಿ. ನಿನಗೇಕೆ ಅದನ್ನು ನೋಡುವ ಹಂಬಲ ಎಂದ. ಆದರೂ ರುದ್ರ ಬಿಡಲಿಲ್ಲ. ಪರಮಾತ್ಮ ನಾಳೆ ಬಾ ತೋರಿಸುತ್ತೇನೆ ಎನಲು ಮುಂದಿನ ದಿನ ಬಂದ ಪರಮಾತ್ಮನ ಮೋಹಿನಿ ರೂಪವ ಕಂಡು ಪಕ್ಕದಲ್ಲಿದ್ದ ಪಾರ್ವತಿಯನ್ನೂ ಪರಿಗಣಿಸದೆ ಮೋಹಿನಿಯ ಹಿಂದೆ ಓಡಿದ. ಪರಮಾತ್ಮನ ಮೋಹಿನಿರೂಪವನ್ನು ನೋಡಿ ಆಕರ್ಷಿತನಾಗಿ ಸೆರಗ ಪಿಡಿಯಲು ಬರಲು

ಶ್ರೀಹರಿಯು ಶಂಖಚಕ್ರಧಾರಿಯಾಗಿ ಕಾಣಲು ಆಗ ರುದ್ರ ನಾಚಿದ. ತಲೆ ತಗ್ಗಿಸಿನಿಂತ. ಇಲ್ಲಿಯೂ ಸಹ ಹರಿಯ ಮುಂದ ತನ್ನದೇನೂ ಇಲ್ಲವೆಂಬ ಸತ್ಯವನ್ನು ಶಿವ ತೋರಿಸಿದ.

## ಶಿವನಿಂದ ಪರಮಾತ್ಮನಲ್ಲಿ ಸೋಲು/ಶರಣಾಗತಿ

೧. ಮೋಹಿನಿರೂಪವ ಕಂಡು ಮೋಹಗೊಂಡು ಸೋತದ್ದು.

೨. ಪಾರಿಜಾತಾಪಹರಣ ಪ್ರಸಂಗದಲ್ಲಿ ದೇವೇಂದ್ರನಿಗೆ ಸಹಾಯಕನಾಗಿ ಕೃಷ್ಣನ ವಿರುದ್ಧ ಯುದ್ಧಕ್ಕೆ ಬಂದ ಶಿವನನ್ನು ಗರುಡನೇ ಅನೇಕ ಗಾವುದ ದೂರ ಆಚೆ ಬೀಳಿಸಿ ಸೋಲಿಸಿದ ಆಗ ಅಸುರಾವೇಶ ಹೋಗಿ ಶಿವನು ಪರಮಾತ್ಮನಲ್ಲಿ ಶರಣಾದ.

೩. ಅಶ್ವತ್ಥಾಮರೂಪದಿಂದ ದುಷ್ಟ ದುರ್ಯೋಧನನಿಗೆ ಸಹಾಯಕನಾಗಿ ಉಪಪಾಂಡವರನ್ನು ಕೊಂದು, ಪಾಂಡವರ ವಂಶದ ಕುಡಿಯಾದ ಪರೀಕ್ಷಿತನನ್ನು ಬ್ರಹ್ಮಾಸ್ತ್ರದಿಂದ ಕಡಿಯುವ ಪ್ರಯತ್ನದಲ್ಲಿ ಪರಮಾತ್ಮನಿಂದ ಸೋಲು.

೪. ರಾವಣನ ಸಂಹಾರವಾದಾಗ ಶಿವನು ತನ್ನ ವರವನ್ನು ನಿರರ್ಥಕಗೊಳಿಸಿದ್ದಕ್ಕಾಗಿ ರಾಮನವಿರುದ್ಧ ಯುದ್ಧ ಮಾಡಿ ಸೋತು ಶರಣಾದ.

೫. ಬಾಣಾಸುರ ಶಿವನ ಪರಮ ಭಕ್ತ. ಇವನು ಶಿವನ ವರಬಲದಿಂದ ಇಡೀ ಜಗತ್ತನ್ನೇ ತಲ್ಲಣಗೊಳಿಸಿದ್ದ. ಒಮ್ಮೆ ವಾದ ವಿವಾದ ಪ್ರಸಂಗದಲ್ಲಿ ಕೃಷ್ಣನು ಬಾಣಾಸುರನ ೯೯೮ ಬಾಹುಗಳನ್ನು ಕತ್ತರಿಸಿದ. ಆಗ ಶಿವನು ಕೃಷ್ಣನ ವಿರುದ್ಧವೇ ಯುದ್ಧಕ್ಕೆ ನಿಲ್ಲಲು, ಕೃಷ್ಣನು ಅವನನ್ನು ಸೋಲಿಸಿದನು.

## ಬ್ರಹ್ಮನ ಐದನೆ ತಲೆಯನ್ನು ತೆಗೆದ ಶಿವ –

ಬ್ರಹ್ಮದೇವರಿಗೆ ಮೊದಲು ಐದು ತಲೆಗಳಿದ್ದವು. ಅವನು ತನ್ನ ಎಲ್ಲ ತಲೆಗಳಿಂದಲೂ ವೇದವನ್ನು ಪಾರಾಯಣ ಮಾಡುತ್ತಿದ್ದನು. ಅದರಲ್ಲಿ ಒಂದು ತಲೆಯಲ್ಲಿ ಬೇಕೆಂದೇ ಶ್ರೀಹರಿಯ ಆಜ್ಞೆಯಂತೆ ಅಸುರಜನ ಮೋಹನಾರ್ಥ ತಪ್ಪುತಪ್ಪಾಗಿ ಹೇಳುತ್ತಿದ್ದನು. ಶಿವನು ಇದನ್ನು ಕಂಡು ಕ್ರೋಧಗೊಂಡು ಆ ಐದನೇ ತಲೆಯನ್ನು ಕಡಿದನು. ಇದರಿಂದ ಅವನಿಗೆ ಬ್ರಹ್ಮಹತ್ಯಾ ದೋಷ ಬಂದಿತು ಮತ್ತು ಬ್ರಹ್ಮನ ಕಪಾಲ ಶಿವನ ಕೈಲೇ ಮೆತ್ತಿಕೊಂಡಿತು. ಅದನ್ನು ಬಿಡಿಸಲು ಬಹಳ ಪ್ರಯತ್ನಪಟ್ಟರೂ ಅದು ಅವನ ಕೈಯಿಂದ ಬಿಡಿಸಲಾಸದ್ಯವಾಯಿತು.

**"ಹರಸಾಹಸ"** – ಸಾಮಾನ್ಯವಾಗಿ ನಾವೇನಾದರೂ ಯಾವುದಾದರೂ ಕಾರ್ಯವನ್ನು ಬಹಳ ಕಷ್ಟಪಟ್ಟು ಮಾಡಿದರೆ, ಅದನ್ನು "ಹರಸಾಹಸ" ಎನ್ನುತ್ತೇವೆ. ಆದರೆ ಯಾವುದೀ ಹರಸಾಹಸ?

**ಶಿವನ ಪ್ರಯತ್ನಗಳು –**

೧. ಶಿವನು ಎಲ್ಲ ಹತ್ತು ದಿಕ್ಕುಗಳಿಗೂ ಹೋಗಿ ಪ್ರಯತ್ನಿಸಿದರೂ, ಅಲ್ಲಿ ಹರಿ ಸರ್ವೋತ್ತಮ ಪ್ರತಿಪಾದನೆ ಮಾಡಿದರೂ ಆ ಕಪಾಲ ತನ್ನ ಕೈಯಿಂದ ಬಿಡಿಸಲಾಗಲಿಲ್ಲ.

೨. ಬದರೀ ಕ್ಷೇತ್ರಕ್ಕೆ ಹೋಗಿ ಬದರೀ ನಾರಾಯಣನನ್ನು ದರ್ಶನಮಾಡಲು ಪ್ರಯತ್ನಿಸಿದಾಗ, ಅಲ್ಲಿ ದರ್ಶನವಾಗಲಿಲ್ಲ.

೩. ನಂತರ ಯಮುನಾ ನದಿಗೆ ಹೋದರೆ, ಅಲ್ಲಿ ಯಮುನೆಯೇ ಒಣಗಿ ಹೋಯಿತು.

೪. ನಂತರ ಪ್ಲಾಕ್ಷ್ಯ ದ್ವೀಪಕ್ಕೆ ಹೋದನು

೫. ನಂತರ ಪುಷ್ಕರ ಕ್ಷೇತ್ರಕ್ಕೆ ಹೋದನು

೬. ನಂತರ ನೈಮಿಷಾರಣ್ಯಕ್ಕೆ ಹೋದನು

೭. ನಂತರ ಸೈಂಧವಾರಣ್ಯಕ್ಕೂ, ಧರ್ಮಾರಣ್ಯಕ್ಕೂ ಹೋದನು

೮. ನಂತರ ಕುರುಕ್ಷೇತ್ರಕ್ಕೆ ಹೋದನು. ಅಲ್ಲಿ ಶ್ರೀ ಹರಿಯು ಕೇಶವ ರೂಪದಿಂದ ಪ್ರತ್ಯಕ್ಷನಾಗಿ ಅವನ ಬ್ರಹ್ಮ ಹತ್ಯಾದೋಷವನ್ನು ಪರಿಹಾರ ಮಾಡಿದನು. ಆದ್ದರಿಂದ ಇದನ್ನೇ "ಹರಸಾಹಸ"ವೆಂದು ಕರೆಯುತ್ತಾರೆ.

## ರುದ್ರದೇವರು ನಮಗೆ ಮಾಡಿರುವ ಉಪಕಾರಗಳು –

೧. ಗಂಗಾಧರನಾದ ಈಶ್ವರನು ಭಗೀರಥ ಪ್ರಯತ್ನದಿಂದ ಗಂಗೆ ಭೂಮಿಗೆ ಬಂದಿಳಿದಾಗ, ಅವಳನ್ನು ತನ್ನ ಶಿರದಲ್ಲಿ ಹಿಡಿದು ನಿಲ್ಲಿಸದಿದ್ದರೆ ಭಾರೀ ದುರಂತವೇ ಆಗುತ್ತಿತ್ತು.

೨. ಸಮುದ್ರ ಮಥನ ಕಾಲದಲ್ಲಿ ಇಡೀ ದೇವತಾ ಸಮೂಹ ಮತ್ತು ದೈತ್ಯಸಮೂಹ ಕಂಗೆಟ್ಟಾಗ, ವಾಯುದೇವರು ಅನುಗ್ರಹಿಸಿ ನೀಡಿದ ವಿಷವನ್ನು ವೀರೋಚಿತವಾಗಿ ಕುಡಿದು ಸಮಸ್ತ ಜೀವರಾಶಿಗಳಿಗೂ ಎರಗಿದ ದುರಂತವನ್ನು ಪೂರ್ತಿ ಪರಿಹರಿಸಿ ನಂಜುಂಡನಾಗಿ ಉಪಕರಿಸಿದರು.

೩. ದುಷ್ಟರಾದ ತ್ರಿಪುರಾಸುರ, ಅಂಧಕಾಸುರ, ಮಹಿಷಾಸುರನ ಧ್ವಂಸ ಮಾಡಿ ಧರ್ಮ ನಂಬದವನಿಗೆ ದಂಡ ನಿಶ್ಚಿತ ಎಂಬ ತತ್ತ್ವ ತಿಳಿಸಿದರು.

೪. ಶುಕಾಚಾರ್ಯರಾಗಿ ಭೂಮಿಗೆ ಬಂದು, ವೇದವ್ಯಾಸರಲ್ಲಿ ಅವತರಿಸಿ, ಭಾಗವತ ಸುಧೆಯನ್ನು ಹರಿಸಿದರು.

೫. ಸಾಧಕರಿಗೆ ಭಗವಂತನಲ್ಲಿ ಸಾಧನೆ ಮಾಡುವ ಹಂಬಲ ಹಲವಾರು ಇರುತ್ತವೆ. ಅವರ ಮನಸ್ಸು ಸ್ಥಿರಗೊಳಿಸಿ ಅವರ ಸಾಧನೆಗೆ ದಾರಿಮಾಡುವವನೇ ಶಿವ – ತೈಲಧಾರೆಯಂತೆ ಮನಸು ಕೊಡು ಹರಿಯಲ್ಲಿ ಶಂಭೋ।ಕೈಲಾಸವಾಸ ಗೌರೀಶ ಈಶ ।

೬. ಆರೋಗ್ಯಭಾಗ್ಯ ನೀಡುವವನೇ ಮಂಗಳರೂಪಿ ರುದ್ರ

೭. ಸಂಸಾರ ಸುಖ ಬಯಸುವವರು ಶಿವನನ್ನು ಸ್ಮರಿಸಿ ಸೇವಿಸಲು – ಸಂಸಾರ ಸುಖ ನೀಡುವನೇ ಶಿವ.

**೧೨ ಜ್ಯೋತಿರ್ಲಿಂಗಗಳು –** ಸೋಮನಾಥೇಶ್ವರ (ಸೌರಾಷ್ಟ್ರ), ಮಲ್ಲಿಕಾರ್ಜುನ (ಶ್ರೀಶೈಲಂ) ಮಹಾಕಾಲ (ಉಜ್ಜಯಿನಿ) ಓಂಕಾರಮ್ (ಅಮಲೇಶ್ವರ) ವೈದ್ಯನಾಥೇಶ್ವರ (ಪರಲಿ) ಭೀಮಸಂಕರ (ದಕ್ಷಿಣ) ರಾಮೇಶ್ವರ (ರಾಮಸೇತು) ನಾಗೇಶ್ವರ (ಧಾರುಕ ಅರಣ್ಯ) ವಿಶ್ವೇಶ್ವರ (ವಾರಾಣಾಸಿ) ತ್ರಯಂಬಕೇಶ್ವರ (ಗೋದಾವರಿ) ಕೇದಾರೇಶ್ವರ (ಕೇದಾರ) ಘುಶ್ಮೇಶ (ಶಿವಾಲಯ).

**ಶೈವಕ್ಷೇತ್ರಗಳು** – ಕೇದಾರದ ಶಾರ್ದೂಲಲಿಂಗ, ಕಾಶಿಯ ವಿಶ್ವನಾಥ, ದ್ವಾರಕೆಯ ನಾಗೇಶ್ವರ, ಕುಂಭಕೋಣದ ಕುಂಭೇಶ್ವರ, ಶ್ರೀಶೈಲದ ಮಲ್ಲಿಕಾರ್ಜುನ, ಶ್ರೀರಂಗದ ಜಂಬುಕೇಶ್ವರ, ರಾಮೇಶ್ವರದ ರಾಮೇಶ್ವರ, ತಂಜಾವೂರಿನ ಬೃಹದೀಶ್ವರ, ಹಂಪೆಯ ವಿರೂಪಾಕ್ಷ, ಉಜ್ಜಯಿನಿಯ ಮಹಾಕಾಲ, ನಂಜನಗೂಡಿನ ನಂಜುಂಡೇಶ್ವರ, ಗೋಕರ್ಣದ ಗೋಕರ್ಣೇಶ್ವರ, ಹಸ್ತಿನಾಪುರದಲ್ಲಿ ವ್ಯಾಘ್ರೇಶ್ವರಲಿಂಗ, ತಿರುವಣ್ಣಾಮಲೈಯಲ್ಲಿರುವ ಅರುಣಾಚಲೇಶ್ವರ, ಈರೀತಿ ಹಲವಾರು ಕ್ಷೇತ್ರಗಳು.

**ವೈಷ್ಣವರಿಂದ ಪೂಜಿತ ಶಿವ –** ೧೫ನೇ ಶತಮಾನದಲ್ಲಿ ಶ್ರೀ ಸೋಂದಾ ವಾದಿರಾಜರಿಂದ ಕರಾರ್ಚಿತ ಧರ್ಮಸ್ಥಳ ಮಂಜುನಾಥೇಶ್ವರ. ಒಮ್ಮೆ ವಾದಿರಾಜರು ತಮ್ಮ ಯಾತ್ರೆಯ ದಾರಿಯಲ್ಲಿ ಇಲ್ಲಿಗೆ ಬಂದಾಗ, ಅಲ್ಲಿನ ಜನರೆಲ್ಲ ವಾದಿರಾಜರನ್ನು ಇಲ್ಲೇ ಪೂಜೆ ನೆರವೇರಿಸುವಂತೆ ಕೋರಿದರು. ಆದರೆ ಆ ಕ್ಷೇತ್ರದಲ್ಲಿ ಅಲ್ಲಿಯವರೆಗೂ ಭೂತಪ್ರೇತ ಪೂಜೆ ಜಾಸ್ತಿಯಿದ್ದುದರಿಂದ ವಾದಿರಾಜರು ಒಪ್ಪಲಿಲ್ಲ. ಕಡೆಗೆ ಅಲ್ಲಿನ ಜನ ಬಹಳ ಒತ್ತಾಯ ಮಾಡಿ ಈ ಕ್ಷೇತ್ರವನ್ನು ಪಾವನಗೊಳಿಸುವಂತೆ ಬೇಡಿಕೊಂಡರು.


ಆಗ ವಾದಿರಾಜರು ಕದ್ರಿಯಲ್ಲಿದ್ದ ವಿಗ್ರಹವನ್ನು ತರಿಸಿ ಅಲ್ಲೇ ಪ್ರತಿಷ್ಠಾಪಿಸಿ ಅದಕ್ಕೆ ಮಂಜುನಾಥೇಶ್ವರ ಎಂಬ ಹೆಸರಿನ್ನಿರಿಸಿ, ಆ ಕ್ಷೇತ್ರಕ್ಕೆ ಧರ್ಮಸ್ಥಳ ಎಂದು ಮರುನಾಮಕರಣ ಮಾಡಿದರು. ಈಗಲೂ ಧರ್ಮಸ್ಥಳದ ಮಂಜುನಾಥ ವೈಷ್ಣವರಿಂದಲೇ ಪೂಜಿಸಲ್ಪಡುತ್ತಿದ್ದಾನೆ. ಬೆಂಗಳೂರಿನ ಬಸವನಗುಡಿಯಲ್ಲಿ ವ್ಯಾಸರಾಜಮಠದಲ್ಲಿ ಹಾಗೂ ಮೈಸೂರಿನ ಸುಬ್ಬರಾಯ ದಾಸರಗುಡಿಯೆಂದು ಪ್ರಸಿದ್ಧವಾದ ದೇವಸ್ಥಾನದಲ್ಲಿ ಕೂಡ ವೈಷ್ಣವರಿಂದಲೇ ನಿತ್ಯ ಪೂಜಿತನಾದ ಈಶ್ವರನ ಲಿಂಗವಿದೆ. ಉಡುಪಿ ಹಾಗೂ ಸೋಂದಾ ಕ್ಷೇತ್ರಗಳಲ್ಲೂ ಕೂಡ ಶಿವನ ದರ್ಶನ ಮಾಡಬಹುದು.

**ಕೇದಾರದಲ್ಲಿ ಶಿವಲಿಂಗ** – ಹಸ್ತಿನಾಪುರದಲ್ಲಿ ವಿಷ್ಣುಪೂಜೆಗೆ ವಿಘ್ನ ಮಾಡಲೆಂದು ಗಂಗೆ ಒಮ್ಮೆ ಬಂದಳು. ಆಗ ಭೀಮಸೇನದೇವರು ಅವಳನ್ನು ಎಡಗೈಯಿಂದ ತಳ್ಳಿದಾಗ ಅವಳು ಬಹು ಯೋಜನ ದೂರಕ್ಕೆ ಸರಿದಳು. ಆಗ ಶಿವ ಬಂದನು. ಭೀಮನ ವಿಷ್ಣುಭಕ್ತಿಯನ್ನು ಪರೀಕ್ಷಿಸುವನೆಂಬಂತೆ ಭೀಮನ ವ್ಯಕ್ತಿತ್ವವನ್ನು ತೋರಿಸಲೋಸುಗ ಶಿವನು ಹುಲಿಯರೂಪ ಧರಿಸಿ, ಕಪಿಲಗೋರೂಪ ಧರಿಸಿದ್ದ ಪಾರ್ವತಿಯನ್ನು ಸಂಹರಿಸುವಂತೆ ನುಗ್ಗಿದ. ಆಗ ಭೀಮ ಗದೆಯಿಂದ ಹೊಡೆಯಲು ಸೋತ ಶಿವ ಮೂರ್ಛಿತನಾಗಿ ಲಿಂಗದೊಳಗೆ ಅಡಗಿ ಕೂತನು. ಆಗ ಆ ಶಿವಲಿಂಗ **ವ್ಯಾಘ್ರೇಶ್ವರ** ಎಂದು ಹೆಸರಾಯಿತು. ಮತ್ತೊಮ್ಮೆ ಹಿಮವತ್ಪರ್ವತದಲ್ಲಿ ಗೋಮತೀ ನದಿಯ ತೀರದಲ್ಲಿ ಯುದ್ಧ ನಡೆಯಿತು. ಅಲ್ಲಿಯೂ ಸಹ ಶಿವನು ಸೋತು ಮತ್ತೊಂದು **ಶಾರ್ದೂಲಲಿಂಗ** ಉಂಟಾಯಿತು. ನಂತರ ಶಿವನೇ ಬ್ರಾಹ್ಮಣರೂಪದಿಂದ ಕೇದಾರದಲ್ಲಿ ಭೀಮನೊಂದಿಗೆ ಯುದ್ಧಕ್ಕೆ ಬರಲು ಅಲ್ಲೂಸಹ ಭೀತನಾಗಿ ಲಿಂಗದೊಳಗೆ ಸೇರಿಕೊಂಡ. ನಾಚಿದ ಅವನು ಅಂದಿನಿಂದ ಅದು ವೇದ ಬಲ್ಲವರಿಗೆ ಅಗಮ್ಯವಾಗಲಿ ಎಂದು ಶಾಪಿಸಿದ. ಹೀಗೆ ಶಿವನೇ ನೀಡಿರುವ ಶಾಪದಿಂದಾಗಿ ಕೇದಾರಯಾತ್ರೆ ವೈಷ್ಣವರಿಗೆ ನಿಷಿದ್ಧವೆನ್ನಿಸಿದೆ. ಆದರೆ ಕೇದಾರಸ್ಮರಣೆ ಮಾತ್ರ ನಿಷಿದ್ಧವಲ್ಲ ಎಂಬುದು ವಿಶೇಷ. ಕೇದಾರ ಯಾತ್ರೆ ಮಾಡಿದ ವೈಷ್ಣವರಿಗೆ ಜ್ಞಾನ ನಾಶವಾಗುವಂತೆ ಶಾಪವಿತ್ತಿದ್ದಾನೆ ಶಿವ. ಹೀಗೆ ಮೂರು ಬಾರಿ ಶಿವನನ್ನು ಪರಾಭವಗೊಳಿಸಿ ಲಿಂಗ ಸೇರುವಂತೆ ಮಾಡಿದ ಭೀಮಸೇನನೇ ತನಗಿಂತ ಮಿಗಿಲು ಎಂದು ತೋರಿಸಿಕೊಟ್ಟಿರುವಾಗ ಅಂತಹ ಭೀಮನಿಂದಲೂ ಪೂಜ್ಯನಾದ ವಿಷ್ಣು ಸರ್ವೋತ್ತಮನಲ್ಲವೇ. (ಮಹಾಭಾರತ ತಾತ್ಪರ್ಯ ನಿರ್ಣಯ ಅಧ್ಯಾಯ ೨೦, ಶ್ಲೋಕ ೨೧–೨೪)

## ಶಿವನ ಸಂಸಾರ ಮತ್ತು ಮತಗಳು–"ಪರಮ ವೈಷ್ಣವರು" -

**ಶಿವನ ಪತ್ನಿ ಉಮಾದೇವಿ**. ಗಣಪತಿ ಮತ್ತು ಸುಬ್ರಹ್ಮಣ್ಯ (ಗಜಮುಖ ಷಣ್ಮುಖರು) ಇವರ ಪುತ್ರರು. ಆನೆಯ ಮುಖ ಹೊಂದಿದ್ದರಿಂದ ಗಜಮುಖನಾದರೆ, ಆರು ಮುಖವುಳ್ಳವನಾದ್ದರಿಂದ ಷಣ್ಮುಖ ಸುಬ್ರಹ್ಮಣ್ಯ. ಪತ್ನಿ ಪಾರ್ವತಿ ಶಾಕ್ತಮತದ ಅಧಿದೇವತೆ; ಗಜಮುಖದ ಗಣಪತಿ ಗಾಣಪತಮತಕ್ಕೆ ಅಧಿದೇವತೆ; ಷಣ್ಮುಖ ಸ್ಕಾಂದಮತಕ್ಕೆ ಅಧಿದೇವತೆ; ಶಿವ ಪಾಶುಮತದ ಅಧಿದೇವತೆ. ಒಟ್ಟಿನಲ್ಲಿ ಶಾಕ್ತ, ಗಾಣಪತ, ಸ್ಕಾಂದ ಹಾಗೂ ಪಾಶುಪತ ಈ ನಾಲ್ಕೂ ಮತಗಳಿಗೂ ಈ ಶಿವ ಮತ್ತು ಅವನ ಸಂಸಾರವೇ ಕಾರಣ ಎಂಬುದು ವಿಶೇಷ. ಆದರೂ ಶಿವ ಮತ್ತು ಅವನ ಸಂಪೂರ್ಣ ಸಂಸಾರ ಪರಮವೈಷ್ಣವದೀಕ್ಷೆ ಹೊಂದಿದವರೆಂಬುದು ಮತ್ತೊಂದು ವಿಶೇಷ. ಹೀಗಿದ್ದೂ ಅವರೆಲ್ಲ ಏಕೆ ಈರೀತಿ ಪರಮತ ಪ್ರತಿಪಾಧನೆಗೆ ದಾರಿಮಾಡಿದ್ದಾರೆ?

ಉತ್ತರ – ಪರಮಾತ್ಮನ ಆದೇಶ. ಅಸುರ ಜನ ಮೋಹನಾರ್ಥ.



ಲಘುಶಿವಸ್ತುತಿಃ

ಲಲಿತಚಂದ್ರನಿಭಾನನಸುಸ್ಮಿತಂ ಶಿವಪದಂ ಶಿವದಂ ಸ್ಮರತಾಂ ಶಿವಮ್ ।
ವಿಶದಕೋಟಿತಟಿತ್ಪ್ರಭಯಾ ಯುತಂ ಶಿವಜಯಾ ಶಿವಯಾ ಶಿವಯಾ ಯುತಮ್।೧।
ನಟನನಾಟ್ಯನಟಂ ನಟಗಾಯಕಂ ಜನಮುದಂ ಜಲಜಾಯತಲೋಚನಮ್ ।
ಭುಜಗ ಭೂಷಣಭೂಷಿತವಿಗ್ರಹಂ ಪ್ರಣಮ ಹೇ ಜನತೇ ಜನವಲ್ಲಭಮ್ ।
ಶ್ರುತಿಶತಪ್ರಭಯಾ ಪ್ರಭಯಾ ಯುತಂ ಹರಿಪದಾಬ್ಜಭವಾಂ ಶಿರಸಾ ಧೃತಮ್ ।೨।
ಶಿವ ಶಿವೇತಿ ಶಿವೇತಿ ಶಿವೇತಿ ವೈ ಭವ ಭವೇತಿ ಭವೇತಿ ಭವೇತಿ ವಾ ।
ಮೃಡಮೃಡೇತಿ ಮೃಡೇತಿ ಮೃಡೇತಿ ವೈ ಭಜತಿ ಯಃ ಸತತಂ
ಪ್ರಣತಾಮಿಯಾತ್॥೩॥

॥ ಇತಿ ಶ್ರೀವ್ಯಾಸತೀರ್ಥಶ್ರೀಚರಣಕೃತಾ ಲಘುಶಿವಸ್ತುತಿಃ ॥

ದೋಷಂಮೇ ಹರ ಹೇ ಹರೇತಿ ಪತಿತಂ ಪಾದೇ ನಖಚ್ಛದ್ಮನಾ ।
ನಿರ್ದೋಷಂ ಮೃಗಬಿಂಬಮೇಣಹರಣಾತ್ಕೃತ್ವೇವ ಮೂರ್ಧ್ನಿನ್ಯಧಾತ್।
ಗಂಗಾತೀರನಿವಾಸತ: ಶುಚಿತಮಂ ಕುರ್ವನ್ನಿವಾಹೀಶ್ವರಾಸಂಗಾತ್
ತತ್ ಪ್ರಥಯನ್ನಿವ ಪ್ರತಿದಿನಂ ಪಾಯಾತ್ ಸ ಮೃತ್ಯುಂಜಯ: ।

Collection by
Narahari Sumadhwa
For www.sumadhwaseva.com